5C.R.P.67

| |
|---|
| Form No.4 (Civil)<br>Deposition Sheets<br>(R.P.No.57) |

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 73/2022

ದಿನಾಂಕ ಃ 16.07.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.
ಸಿ. ಡಬ್ಲ್ಯೂ:10 ಪಿ. ಡಬ್ಲ್ಯೂ:11

| | |
|---|---|
| ಸಾಕ್ಷಿದಾರರ ಹೆಸರು | ಕೆ ಎಂ ನಂಜಯ್ಯ |
| ತಂದೆಯ ಹೆಸರು | ಮಾದಯ್ಯ |
| ವಯಸ್ಸು | 65 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಕಿರಗಸೂರು. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಫ್ರಾಸಾ.1, 3 ರಿಂದ 5 ಗೊತ್ತು. ಮಧುಮಾಲಿನಿಯು, ಫ್ರಾಸಾ.3 ಶೇಖರ್ ರವರ ಮಗಳಾಗಿರುತ್ತಾಳೆ. 5 ವರುಷಗಳ ಹಿಂದೆ ಮದುಮಾಲಿನಿಯು, ವಡ್ಡರಹಳ್ಳಿಯ ತನ್ನ ಗಂಡನ ಮನೆಯಲ್ಲಿ ತೀರಿಕೊಂಡಿರುತ್ತಾಳೆ. ಯಾವ ಕಾರಣದಿಂದ ಆಕೆ ತೀರಿಕೊಂಡಳು ಎಂದರೆ, ಸಾಕ್ಷಿಯು ಆಕೆ ನೇಣ ಹಾಕಿಕೊಂಡಳೋ, ಹೊಡೆದು ಸಾಯಿಸಿದರೋ ನನಗೆ ಗೊತ್ತಿಲ್ಲ ಎನ್ನುತ್ತಾರೆ.
2. ಆಕೆ ಮದುವೆಯು 8 ವರುಷದ ಹಿಂದೆ ನಡೆದಿತ್ತು. ಆಕೆಯನ್ನು ವಡ್ಡರಹಳ್ಳಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಆಕೆಯ ಗಂಡನನ್ನು ನಾನು ನೋಡಿದ್ದೇನೆ . ಆತನ ಹೆಸರು ನನಗೆ ತಿಳಿದಿಲ್ಲ. ಆತನನ್ನು ನೋಡಿದರೆ ಗುರುತಿಸುತ್ತೇನೆ.

   (1 ನೇ ಆರೋಪಿಯು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು, 1 ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲ ಎಂದು ಅವರ ಪರ ವಕೀಲರು ಹೇಳಿರುತ್ತಾರೆ.)
3. ಸದರಿ ಫ್ರಾಸಾ.3 ರವರ ಮನೆಯಲ್ಲಿ ಮಧುಮಾಲಿನಿಯ ಹಾಗೂ 1 ನೇ ಆರೋಪಿಯ ಮದುವೆ ಮಾತುಕತೆ ಆಗಿತ್ತು. ಹುಡುಗನ ಕಡೆಯಿಂದ ಹುಡುಗನ ತಂದೆ, ಅವರ ಊರಿನ ಯಜಮಾನರು ಮತ್ತು 1 ನೇ ಆರೋಪಿ ಬಂದಿದ್ದರು. ಹುಡುಗಿ ಕಡೆಯಿಂದ, ನಮ್ಮ ಊರಿನ

ಯಜಮಾನರು ಇದ್ದರು, ನಾನೂ ಸಹ ಭಾಗವಹಿಸಿದ್ದೆನು. ಸದರಿ ಮಧುಮಾಲಿನಿಯ ತಂದೆ ತಾಯಿ, ಅವರ ಸಂಬಂಧಿಕರು ಸಹ ಭಾಗವಹಿಸಿದ್ದರು.

4. ಸದರಿ ಮದುವೆ ಮಾತುಕತೆಯಲ್ಲಿ, ಒಂದು ಹಾರ, ಒಂದು ಉಂಗುರ ಕೊಡುವ ಬಗ್ಗೆ ಮಾತುಕತೆಯಾಗಿತ್ತು. ಸದರಿ 1 ನೇ ಆರೋಪಿಯ ತಂದೆ ಹಾರ ಮತ್ತು ಉಂಗುರವನ್ನು ಕೇಳಿರುತ್ತಾರೆ. ಮಧುಮಾಲಿನಿಯ ತಂದೆ ಸದರಿ 1 ನೇ ಆರೋಪಿ ತಂದೆ ಕೇಳಿದ ಒಂದು ಹಾರ, ಒಂದು ಉಂಗುರ ಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದರು. ಛತ್ರದಲ್ಲಿ ಮದುವೆ ಮಾಡಿಕೊಡುವಂತೆ ಸದರಿ 1 ನೇ ಆರೋಪಿಯ ಕಡೆಯವರು ಕೇಳಿದ್ದರು.

5. ಸದರಿ ಮಧುಮಾಲಿನಿಯ ಹಾಗೂ1 ನೇ ಆರೋಪಿಯ ಮದುವೆಯಲ್ಲಿ ನಾನು ಭಾಗವಹಿಸಿದ್ದೆನು. ಸದರಿ ಮದುವೆಯ ದಿನ ಛತ್ರದಲ್ಲಿ ಉಂಗುರವನ್ನು, ಫ್ರಾಸಾ. 3 ರವರು, 1 ನೇ ಆರೋಪಿಗೆ ನೀಡಿರುತ್ತಾರೆ. ಹಾರವನ್ನು ಹಿಂದುಳಿದು ಕೊಡುತ್ತೇನೆ ಎಂದು ಫ್ರಾಸಾ.3 ರವರು ಹೇಳಿದ್ದರು. ಮಧುಮಾಲಿನಿಯ ಮದುವೆಯ ನಂತರ ಆಕೆಯು, ವಡ್ಡರಹಳ್ಳಿಯಲ್ಲಿ ವಾಸ ಮಾಡುತ್ತಿದ್ದಳು. ಸದರಿಯವರ ಮನೆಯಲ್ಲಿ, 1 ನೇ ಆರೋಪಿ, ಮಧುಮಾಲಿನಿ, 1 ನೇ ಆರೋಪಿಯ ತಂದೆ ಮತ್ತು ಮತ್ತು ಮಧುಮಾಲಿನಿಯ ಮಕ್ಕಳು ವಾಸಿಸುತ್ತಿದ್ದರು.

6. ಮದುವೆಯಾದ ನಂತರ ಫ್ರಾಸಾ. 3 ರವರು ನನಗೆ ಸಿಕ್ಕಿದ್ದರು. ಆಗ ನಾನು ಮಧುಮಾಲಿನಿಯ ಬಗ್ಗೆ ವಿಚಾರಿಸಿದಾಗ, ಆಕೆ ಚೆನ್ನಾಗಿದ್ದಾರೆ ಎಂದು ಫ್ರಾಸಾ. 3 ರವರು ಹೇಳಿದ್ದರು.

7. ಮಧುಮಾಲಿನಿ ತೀರಿಕೊಂಡ ವಿಚಾರವನ್ನು ನಮ್ಮ ಊರಿಗೆ ಯಾರೋ ತಿಳಿಸಿದ್ದರು, ಆಗ ಮಧುಮಾಲಿನಿಯ ತಂದೆ ತಾಯಿ ಬಾಯಿ ಬಡಿದುಕೊಳ್ಳುತ್ತಿದ್ದಾಗ, ಸದರಿ ಮಧುಮಾಲಿನಿ ತೀರಿಕೊಂಡ ವಿಚಾರ ನನಗೆ ಗೊತ್ತಾಗಿರುತ್ತದೆ. ಆಗ ಸಮಯ ಮಧ್ಯಾಹ್ನ ಸುಮಾರು 12.00 ಗಂಟೆ ಆಗಿತ್ತು. ನಂತರ ನಾನು ಮಳವಳ್ಳಿ ಆಸ್ಪತ್ರೆಗೆ ಹೋಗಿದ್ದೆನು. ಮಧುಮಾಲಿಯ ಶವವನ್ನು ಮಳವಳ್ಳಿ ಆಸ್ಪತ್ರೆ ಶವಾಗಾರದಲ್ಲಿ ಇಡಲಾಗಿತ್ತು. ಆಸ್ಪತ್ರೆಯಲ್ಲಿ ಮಧುಮಾಲಿನಿಯ ತಂದೆ ತಾಯಿ ಸಹ ಇದ್ದರು. ಅಲ್ಲಿ, ಮಧುಮಾಲಿನಿ ಹೇಗೆ ತೀರಿಕೊಂಡಳೆಂದು ನನಗೆ ಗೊತ್ತಾಗಿಲ್ಲ. ಫ್ರಾಸಾ.3 ರವನ್ನು ನಾನು ವಿಚಾರಿಸಿಲ್ಲ, ಕಾರಣ, ಅವರು ದುಃಖದಲ್ಲಿ ಇದ್ದರು. ಮಧುಮಾಲಿನಿ ನೇಣು ಹಾಕಿಕೊಂಡಳೆಂದು ಹುಡುಗನ ಕಡೆಯವರು ಹೇಳುತ್ತಾರೆ, ಆಕೆಯನು ಹೊಡೆದು ಸಾಯಿಸಿದ್ದಾರೆಂದು ಹುಡುಗಿಯ ಕಡೆಯವರು ಹೇಳುತ್ತಾರೆ.

ನ್ಯಾಯಾಲಯ ಮುಂದೆ ಇರುವ 2 ನೇ ಆರೋಪಿಯನ್ನು ಸಾಕ್ಷಿಯು ನೋಡಿ, 1 ನೇ ಆರೋಪಿಯ ತಂದೆ ಎಂದು ಗುರುತಿಸಿರುತ್ತಾರೆ.

8. ಮಧುಮಾಲಿನಿಯ ತಂದೆ ಪ್ರಾಸಾ.3 ರವರು, ಮಧುಮಾಲಿನಿಯನ್ನು ಹೊಡೆದು ಸಾಯಿಸಿದ್ದಾರೆಂದು ದೂರು ನೀಡಿದ್ದರ ಮೇರೆಗೆ ಆರೋಪಿತರ ವಿರುದ್ಧ ಪ್ರಕರಣ ದಾಖಾಗಿರುತ್ತದೆ. ಪೊಲೀಸರು ನನ್ನನ್ನು ವಿಚಾರಿಸಿಲ್ಲ, ಪೊಲೀಸರು ಸಹಿ ಮಾಡು ಎಂದಿದ್ದರಿಂದ ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

9. ಸದರಿ ಮದುವೆ ಮಾತುಕತೆಯಲ್ಲಿ 2 ನೇ ಆರೋಪಿಯು ವರದಕ್ಷಿಣೆಯಾಗಿ 1 ಲಕ್ಷ ರೂ ಹಣವನ್ನು ಸಹ ಕೇಳಿದ್ದರು ಎಂದರೆ ಸರಿ. ಆಗ ಪ್ರಾಸಾ. 3 ರವರು, ತಮಗೆ ಅಷ್ಟು ಕೊಡಲು ಆಗುವುದಿಲ್ಲ, ಹುಡುಗನಿಗೆ 20 ಗ್ರಾಂ ಚಿನ್ನದ ಹಾರ, ಒಂದು ಉಂಗುರ, ಹುಡುಗಿಗೆ ಒಂದು ಜೊತೆ ಓಲೆ , ಹ್ಯಾಂಗಿಗ್ಸ್ ಹಾಗೂ ಗೆಜ್ಜೆ ಮಾಟಿ ಕೊಟ್ಟು ಚೌಲ್ಟ್ರಿಯಲ್ಲಿ ಮದುವೆ ಮಾಡಿಕೊಡುತ್ತೇವೆ ಎಂದು ಹೇಳಿದ್ದರು ಎಂದರೆ ಸರಿ. ಹಣವನ್ನು ಈಗ ಕೊಡಲು ಆಗುವುದಿಲ್ಲ, ಹಣವನ್ನು ಹಿಂದುಳಿದು ಕೊಡುತ್ತೇವೆ ಎಂದು ಹುಡುಗಿಯ ಮನೆಯವನ್ನು ತಿಳಿಸಿದ್ದರು ಎಂದರೆ ಸರಿ. ಅದಕ್ಕೆ ಆರೋಪಿತರು ಒಪ್ಪಿಕೊಂಡರು ಎಂದರೆ ಸರಿ.

10. ಮದುವೆ ಮಂಟಪದಲ್ಲಿ ಹುಡುಗಿಯ ತಂದೆ ತಾಯಿ, ನನ್ನನ್ನು ಹಾಗೂ ಊರಿನ ಇತರರನ್ನು ಮಾತುಕತೆಯಂತೆ ಹುಡುಗನಿಗೆ 20 ಗ್ರಾಂ ಚಿನ್ನದ ಹಾರ, ಒಂದು ಉಂಗುರವನ್ನು ಕೊಡುತ್ತಿದ್ದೇವೆ ಬನ್ನಿ ಎಂದು ಕರೆದು ನೀಡಿದ್ದರು ಎಂದರೆ ಸಾಕ್ಷಿಯು ಉಂಗುರ ಮಾತ್ರ ನೀಡಿದ್ದರು ಎಂದು ಹೇಳುತ್ತಾರೆ. ನಂತರ ಹುಡುಗಿಯ ಸೋದರತ್ತೆ ಜಯಮ್ಮ ರವರು ಹುಡುಗಿಗೆ, ಒಂದು ಜೊತೆ ಯಾಂಗಿಗ್ಸ್‌ನ್ನು ಹಾಗೂ ಹುಡುಗಿಯ ಚಿಕ್ಕಮ್ಮ ಕೋಮಲ ರವರು ಒಂದು ಜೊತೆ ಗೆಜ್ಜೆ ಮಾಟಿಯನ್ನು ಹಾಕಿದರು ಎಂದರೆ ಸರಿ.

11. 4 ವರುಷಗಳ ನಂತರ ಹುಡುಗಿಯ ತಂದೆ ನನಗೆ ಸಿಕ್ಕಿ, 1 ನೇ ಆರೋಪಿಯು, ವರದಕ್ಷಿಣೆ ಕೇಳುವಾಗ 1 ಲಕ್ಷ ಹಣ ಕೇಳಿದೆನೆಂದು, ಮದುವೆಯ ನಂತರದಲ್ಲಿ ಕೊಡುತ್ತೇನೆ ಎಂದು ಹೇಳಿ, ಸದರಿ ಹಣವನ್ನು ತೆಗೆದುಕೊಂಡು ಬಾ ಹಾಗೂ ಅದರ ಜೊತೆ ಮತ್ತಷ್ಟು ಚಿನ್ನದ

ಒಡವೆಗಳನ್ನು ತೆಗೆದುಕೊಂಡು ಬಾ ಎಂದು ಕಿರುಕುಳ ನೀಡಿ ಸದರಿ ಮಧುಮಾಲಿನಿಯನ್ನು ತವರು ಮನೆಗೆ ಕಳುಹಿಸುತ್ತಿದ್ದರು ಎಂದು ತಿಳಿಸಿದರು ಎಂದರೆ ಸಾಕ್ಷಿಯು ಯಾವಾಗಲೋ ಒಮ್ಮೆ ಪ್ರಾಸಾ. 3 ರವರು ನನಗೆ ತಿಳಿಸಿದ್ದರು ಎಂದು ನುಡಿಯುತ್ತಾರೆ. ಸದರಿ ಮಧುಮಾಲಿನಿ ತಮ್ಮ ಮನೆಗೆ ಬಂದಾಗೆಲ್ಲ, ಹಣ, ಒಡವೆ ಉಂಗುರವನ್ನು ಮಾಡಿಸಿಕೊಟ್ಟು ಚೆನ್ನಾಗಿರು ಎಂದು ಹೇಳಿ ಕಳುಹಿಸಿಕೊಡುತ್ತಿದ್ದೆವು ಆದರೂ ಸಹ ಆರೋಪಿತರಿಗೆ ಹಣದ ದಾಹ ತೀರದೇ, ಮತ್ತೆ ಮತ್ತೆ ಸದರಿ ಮಧುಮಾಲಿನಿಗೆ ನಿಮ್ಮಪ್ಪನ ಮನೆಯಿಂದ ಹಣ, ಒಡವೆ ತರುವಂತೆ ಆ ಹಡುಗಿಗೆ ಹೊಡೆಯುವುದು, ಬೈಯುವುದು ಮಾನಸಿಕವಾಗಿ ಕಿರುಕುಳ ಕೊಡುವುದು ಮಾಡುತ್ತಿದ್ದರೆಂದು ತನಗೆ ತಿಳಿಸಿದರು ಎಂದರೆ ಸಾಕ್ಷಿಯು ಯಾವಾಗಲೋ ಒಮ್ಮೆ ಪ್ರಾಸಾ. 3 ರವರು ನನಗೆ ತಿಳಿಸಿದ್ದರು ಎಂದು ನುಡಿಯುತ್ತಾರೆ. ಆಗ ಸದರಿ ಆರೋಪಿತರು ನಡೆದುಕೊಳ್ಳುತ್ತಿರುವುದು ಸರಿಯಲ್ಲ ಎಂದು ನ್ಯಾಯ ಪಂಚಾಯ್ತಿ ಮಾಡುವುದಾದರೆ ನಮ್ಮನ್ನು ಕರೆಯಿರಿ ಬುದ್ದಿ ಹೇಳುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿ. ಆದರೆ ಪ್ರಾಸಾ. 3 ರವರು ನನ್ನನ್ನು ಕರೆದಿಲ್ಲ ಎಂದರೆ ಸರಿ. ಮತ್ತೊಂದು ದಿನ ಪ್ರಾಸಾ. 3 ಶೇಖರ್ ರವರು ಮಳವಳ್ಳಿಯಲ್ಲಿ ಸಿಕ್ಕಿದಾಗ, ನಿಮ್ಮನ್ನು ಕರೆದುಕೊಂಡು ಹೋಗಿ ನ್ಯಾಯಾ ಪಂಚಾಯಿತಿ ಮಾಡಿದರೆ, ಅಳಿಯ ಮತ್ತು ಬೀಗರು ಸಿಟ್ಟು ಮಾಡಿಕೊಂಡು ಮತ್ತೆ ಆಕೆಗೆ ಕಿರುಕುಳ ನೀಡಬಹುದೆಂದು ಯೊಚನೆ ಮಾಡಿ ತಾನು ಮತ್ತು ತನ್ನ ಹಿರಿಯ ಮಗ 2 ರಿಂದ 3 ಬಾರಿ ಅಳಿಯ ಮತ್ತು ಬೀಗರ ಮನೆಗೆ ಹೋಗಿ ಅವರ ಕೇಳಿದಷ್ಟು ವರದಕ್ಷಿಣೆ ಕೊಟ್ಟು ಮದುವೆ ಮಾಡಿಕೊಟ್ಟಿದ್ದಲ್ಲದೇ ಮಧ್ಯ ಮಧ್ಯ ಚಿನ್ನದ ಉಂಗುರ ಮತ್ತು 50 ಸಾವಿರ ವರೆಗೆ ಹಣವನ್ನು ಕೊಟ್ಟಿದ್ದರೂ ಸಹ ತಮ್ಮ ಮಗಳಿಗೆ ಯಾಕೆ ತೊಂದರೆ ಕೊಡುತ್ತೀರಾ ಎಂದು, ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುವಂತೆ ತಿಳುವಳಿಕೆ ಹೇಳಿ ಬಂದರೆಂದು ತಿಳಿಸಿದರು ಎಂದರೆ ಸಾಕ್ಷಿಯು ಯಾವಾಗಲೋ ಒಮ್ಮೆ ಪ್ರಾಸಾ.3 ರವರು ನನಗೆ ತಿಳಿಸಿದ್ದರು ಎಂದು ನುಡಿಯುತ್ತಾರೆ. ಆ ರೀತಿ ಚೆನ್ನಾಗಿ ನೋಡಿಕೊಳ್ಳುವಂತೆ ಎಂದು ಆರೋಪಿತರು ಹೇಳಿದ ನಂತರವೂ ಸಹ ಮತ್ತೆ ಮತ್ತೆ ಹಣ ಒಡವೆ ತೆಗೆದುಕೊಂಡು ಬಾ ಎಂದು ಆರೋಪಿತರು ಬೈದು ತೊಂದರೆ ಕೊಡವುದು ಮಾಡುತ್ತಿದ್ದ ಬಗ್ಗೆ ಮತ್ತು ನಿನ್ನ ಮತ್ತು ನಿನ್ನ ಮಕ್ಕಳನ್ನು ಸಾಕಲು 1 ಲಕ್ಷ ಹಣವನ್ನು ತವರು ಮನೆಯಿಂದ ಪಡೆದುಕೊಂಡು ಬರುವಂತೆ ಇಲ್ಲವಾದರೆ ನೇಣು ಹಾಕುವಂತೆ ಬೆದರಿಕೆ ಹಾಕುತ್ತಿದ್ದರು ಎಂದು ಹೇಳಿ, ಆರೋಪಿತರಿಗೆ ತಿಳುವಳಿಕೆ ನೀಡುವಂತೆ ನನಗೆ ಕೇಳಿಕೊಂಡರು ಎಂದರೆ ಸಾಕ್ಷಿಯು ಒಂದೊಂದು ಸಾರಿ ಪ್ರಾಸಾ.3 ರವರು ನನ್ನನ್ನು ಕರೆದಿದ್ದರು ಎಂದು ನುಡಿಯುತ್ತಾರೆ. ವಡ್ಡರಹಳ್ಳಿಗೆ ಬಂದು ನಮ್ಮನ್ನು

ಕರೆಯಿರಿ, ನಿಮ್ಮ ಎದುರಿನಲ್ಲಿ ಅವರಿಗೆ ಬುದ್ದಿ ಹೇಳುತ್ತೇನೆ ಎಂದು ನಾನು ಹೇಳಿದೆನು ಎಂದರೆ ಸರಿ.

12. ದಿಃ 04.10.2020 ರಂದು ಮಧ್ಯಾಹ್ನ 1 ನೇ ಆರೋಪಿಯ ಹೆಂಡತಿ ಮಧುಮಾಲಿನಿ ತೀರಿಕೊಂಡಳು ಎಂದರೆ ಸರಿ. ಆ ದಿನ ನಾನು ಆಸ್ಪತ್ರೆಯಲ್ಲಿ ಶೇಖರ್ ರವರನ್ನು ಭೇಟಿಯಾದೆನು ಎಂದರೆ ಸರಿ. ಸದರಿ ಶೇಖರ್, ತಮ್ಮ ಮಗಳು ಸಾಯುವ ಹಿಂದಿನ 2 ದಿನಗಳಲ್ಲಿ ಪೋನ್ ಮಾಡಿ ಬರುವಂತೆ ಹೇಳಿದ್ದರಿಂದ ತನ್ನ ಹೆಂಡತಿ ಹಾಗೂ ಕಿರಿಯ ಮಗ ಆರೋಪಿತರ ಮನೆಗೆ ಹೋಗಿದ್ದಾಗ, ಆರೋಪಿತರು ಸಂಸಾರದ ವಿಚಾರದಲ್ಲಿ ಮತ್ತು ವರದಕ್ಷಿಣೆಯನ್ನು ಹೆಚ್ಚು ತರಲಿಲ್ಲವೆಂದು ಪದೇ ಪದೇ ಬೈದು ಹೊಡೆದು ಕಿರುಕುಳ ನೀಡುತ್ತಿದ್ದಾರೆಂದು ಅಪ್ಪ ಹಾಗೂ ತಮ್ಮ ಇಬ್ಬರೂ ಬಂದು ತಿಳುವಳಿಕೆ ಹೇಳಿದರೂ ಸಹ ಮತ್ತೆ ಮತ್ತೆ ಕಿರುಕುಳ ನೀಡುತ್ತಿದ್ದಾರೆಂದು, ನೀನು ನಿಮ್ಮ ಅಪ್ಪನ ಮನೆಯಿಂದ ಹಣ ತರದಿದ್ದರೆ ನೀನು ಬದುಕಿರುವ ಬದಲು ಸಾಯುವುದು ಲೇಸು ಎಂದು ಆರೋಪಿತರು ಹೇಳುತ್ತಿದ್ದಾರೆಂರು ಆರೋಪಿತರು ತನ್ನ ಹೆಂಡತಿಯ ಬಳಿ ಹೇಳಿ ಕಳುಹಿಸಿದರು ಎಂದು ನನಗೆ ತಿಳಿಸಿದರು ಎಂದರೆ ಸರಿಯಲ್ಲ.

13. ದಿಃ 04.10.2020 ರಂದು ಆರೋಪಿತರ ಮನೆಯಲ್ಲಿ ಜೋರಾಗಿ ಜಗಳ ಕೇಳುತ್ತಿದ್ದು, 10.45 ರಿಂದ 11.00 ಗಂಟೆ ಸಮಯದಲ್ಲಿ 1 ನೇ ಆರೋಪಿಯ ಹೆಂಡತಿ ಮದುಮಾಲಿನಿ ಮನೆಯ ಮುಂದೆ ಬಟ್ಟೆ ತೊಳೆಯುತ್ತಿದ್ದು ಸ್ವಲ್ಪ ಹೊತ್ತಿನಲ್ಲಿ 1 ನೇ ಆರೋಪಿಯು, ಮಧುಮಾಲಿನಿ ನೇಣು ಹಾಕಿಕೊಂಡಿದ್ದಾಳೆ ಎಂದು ಜೋರಾಗಿ ಕೂಗಿಕೊಂಡಾಗ ಪಕ್ಕದ ಮನೆಯ ಮಲ್ಲಿಕಾ ರವರ ಹೋಗಿ ನೋಡಿದರು ಹಾಗೂ ಸದರಿ ಮಲ್ಲಿಕಾ ರವರು ಆರೋಪಿತರು 1 ನೇ ಆರೋಪಿಯ ಹೆಂಡತಿ ಮಧಮಾಲಿನಿ ಸಾವಿಗೆ ಕಾರಣರೆಂದು ಮಲ್ಲಿಕಾ ನನಗೆ ತಿಳಿಸಿದರು ಎಂದ ಫ್ರಾಸಾ. 3 ರವರು ನನಗೆ ತಿಳಿಸಿದರು ಎಂದರೆ ಸರಿಯಲ್ಲ.

14. ತವರು ಮನೆಯಿಂದ ಹಣ ಒಡವೆ ತರುವಂತೆ ಆರೋಪಿತರು ಕಿರುಕುಳ ನೀಡುತ್ತಿದ್ದುದರಿಂದ 1 ನೇ ಆರೋಪಿಯ ಹೆಂಡತಿ ಮಧುಮಾಲಿನಿ ಆತ್ಮಹತ್ಯೆ ಮಾಡಿಕೊಂಡಿದ್ದು ಆಕೆಯು, ಆತ್ಮಹತ್ಯೆ ಮಾಡಿಕೊಂಡಿದ್ದು, ಆರೋಪಿತರ ಪ್ರಚೋದನೆ ಕಾರಣವಾಗಿರುತ್ತದೆ ಆಕೆಯನ್ನು ಮಳವಳ್ಳಿ ಆಸ್ಪತ್ರೆ ಗೆ ಕರೆತಂದರು ಎಂದರೆ ಸರಿ.

15. ದಿಃ 06.10.2020 ರಂದು ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ ‘‘ ಅಲ್ಲಿ ಶೇಖರನು ………………………………… ಕಾರಣರೆಂದು ಹೇಳಿದರು ’’ ಎಂಬ ಭಾಗವನ್ನು ಓದಿ ಹೇಳಿದ್ದು, ಸಾಕ್ಷಿಯು ಸದರಿ ಹೇಳಿಕೆಯ

ಭಾಗವನ್ನು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗವನ್ನು ನಿಪಿ.21 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಂ ಎನ್ ಆರ್ ವಕೀಲರಿಂದಃ</u>**

ನ್ಯಾಯಾಲಯದ ಮಧ್ಯಾಹ್ನ ಸಮಯವಾದ್ದರಿಂದ ಪಾಟೀ ಸವಾಲನ್ನು ಮಧ್ಯಾಹ್ನ 2.45 ಕ್ಕೆ ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

<u>ದಿನಾಂಕ ಃ 16.07.2025 ರಂದು ಮಧ್ಯಾಹ್ನ 3.55 ಗಂಟೆಗೆ ಪ್ರಮಾಣ ವಚನ ಬೋಧಿಸಲಾಗಿದೆ</u>.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಂ ಎಂ ವಕೀಲರಿಂದಃ</u>**

16. ನಾನು 9 ನೇ ತರಗತಿವರೆಗೆ ಓದಿದ್ದೇನೆ. ಪ್ರಾಸಾ.3 ರವರು ನನಗೆ ದಾಯಾದಿಯಾಗಿರುತ್ತಾರೆ. ನಾನು ಊರಿನಲ್ಲಿ 5 ರಿಂದ 6 ವರುಷದಿಂದ ಯಜಮಾನಿಕೆ ಮಾಡುತ್ತೇನೆ. ನಮ್ಮ ಊರಿನಲ್ಲಿ 4 ಜನ ಯಜಮಾನಿಕೆ ಮಾಡುತ್ತೇವೆ. ಕೆಂಪಯ್ಯ ಸಹ ಊರಿನಲ್ಲಿ ಯಜಮಾನಿಕೆ ಮಾಡುತ್ತಾರೆ. ಕೆಂಪಯ್ಯನವರು ಇಲ್ಲದೇ ಇದ್ದಾಗ, ನಾನು ಯಜಮಾನಿಕೆ ಮಾಡುತ್ತೇನೆ. ನಾನು, ಕೆಂಪಯ್ಯ, ಆರೋಪಿಯ ಕಡೆಯವರು ಮದುವೆ ಮಾತುಕತೆಯಲ್ಲಿ ಭಾಗವಹಿಸಿದ್ದೆವು. ಹಣ ಕೊಡುವ ಬಗ್ಗೆ ತಕರಾರು ಆದಾಗ ಆರೋಪಿತರ ಊರಿನವರು ಮಾತುಕತೆ ಮಾಡಿ ಬಗೆಹರಿಸಿದ್ದರು. ಕತ್ತಿಗೆ ಹಾರ ಉಂಗುರ ಹಾಗೂ ಬ್ರಾಸ್ ಲೈಟ್ ನ್ನು ನೀಡುವ ಬಗ್ಗೆ ಮಾತುಕತೆಯಾಗಿತ್ತು. ಎಷ್ಟು ಗ್ರಾಂ ಇರುವ ಸದರಿ ಆಭರಣ ನೀಡಬೇಕೆಂದು ಮಾತುಕತೆ ಆಗಿತ್ತೆಂದು ನನಗೆ ಗೊತ್ತಿಲ್ಲ. ಸದರಿ ಮಾತುಕತೆ ಮಾಡಿ ಬಗೆಹರಿಸಿದ ವ್ಯಕ್ತಿಯ ಹೆಸರು ನನಗೆ ಹೇಳಲು ಆಗುವುದಿಲ್ಲ. ಹಾರ ಮತ್ತು ಹಣವನ್ನು ಹಿಂದುಳಿದು ಕೊಡಬೇಕೆಂದು ಅಲ್ಲಿ ಮಾತುಕತೆಯಾಗಿತ್ತು.

17. ನನ್ನ ಸಮಕ್ಷಮದಲ್ಲಿ ಛತ್ರದಲ್ಲಿ ಉಂಗುರವನ್ನು ನೀಡಿದ್ದರು. ಸದರಿ ಮಧುಮಾಲಿನಿಯ ಮದುವೆಯ ಕಾಲಕ್ಕೆ ವರೋಪಚಾರ ಪದ್ಧತಿ ಇತ್ತು. ಸದರಿ ಮಧು ಮಾಲಿನಿಯ ಮದುವೆಯ ಸಮಯದಲ್ಲಿ ಫೋಟೋ ಮತ್ತು ವೀಡಿಯೋ ಇರಲಿಲ್ಲ. ಮಧುಮಾಲಿನಿಯ ಮದುವೆ ಆದ ನಂತರ ನಾನು ವಡ್ಡರಹಳ್ಳಿಗೆ ಹೋಗಿಲ್ಲ.

18. ನಮ್ಮ ಮನೆಯಿಂದ ಫ್ರಾಸಾ. 3 ರವರ ಮನೆ ಅರ್ಧ ಫರ್ಲಾಂಗು ದೂರ ಇರುತ್ತದೆ. ಮದುವೆಯಾದ ನಂತರ ಮಧುಮಾಲಿನಿ ಅಥವಾ 1 ನೇ ಆರೋಪಿ, ನಮ್ಮ ಮನೆಗೆ ಬಂದಿಲ್ಲ. ಸದರಿ ಮದುವೆಯಾಗಿ 4 ವರುಷಗಳ ನಂತರ ಫ್ರಾಸಾ.3 ರವರು ಸದರಿ ಕಿರುಕುಳದ ಬಗ್ಗೆ ನನಗೆ ಹೇಳಿದ್ದರು. ಅವರು ಸುಮಾರು 4 ಬಾರಿ ಆ ರೀತಿ ಕಿರುಕುಳದ ಬಗ್ಗೆ ಹೇಳಿದ್ದರು. ಸದರಿ ವಿಚಾರ ತಿಳಿದ ನಂತರ ವಡ್ಡರಹಳ್ಳಿಗೆ ಹೋಗಿ ವಿಚಾರಿಸುವ ಬಗ್ಗೆ ನನ್ನ ಮನಸ್ಸಿಗೆ ಬಂದಿಲ್ಲ ಕಾರಣ ಮಧು ಮಾಲಿನಿಯ ತಂದೆ ತಾಯಿ ಇದ್ದರು. ನಾಲ್ಕು ಬಾರಿ ಫ್ರಾಸಾ. 3 ರವರು ಆ ರೀತಿ ಕಿರುಕುಳದ ಬಗ್ಗೆ ಹೇಳಿದ್ದ ಪಕ್ಷದಲ್ಲಿ, ನಾನು ಹಾಗೂ ಕೆಂಪಯ್ಯ ಈ ಬಗ್ಗೆ ವಡ್ಡರಹಳ್ಳಿಗೆ ಹೋಗಿ ಅಲ್ಲಿಯ ಮುಖಂಡರೊಂದಿಗೆ ಅಂದರೆ ಮದುವೆ ಮಾತುಕತೆಯಲ್ಲಿ ಭಾಗವಹಿಸಿದ್ದವರೊಂದಿಗೆ ಪಂಚಾಯಿತಿ ಮಾಡುತ್ತಿದ್ದೆವು, ಫ್ರಾಸಾ. 3 - ಶೇಖರ್ ರವರು ಯಾವುದೇ ವಿಷಯ ಹೇಳದೇ ಇದ್ದುದರಿಂದ, ನಾವು ಯಾವುದೇ ಪಂಚಾಯಿತಿ ಮಾಡಿಲ್ಲ ಎಂದರೆ ಸರಿಯಲ್ಲ. ಮಧು ಮಾಲಿನಿ ಹಾಗೂ 1 ನೇ ಆರೋಪಿ ಅನ್ಯೋನ್ಯವಾಗಿದ್ದರು ಎಂದರೆ ಸಾಕ್ಷಿಯು ಮೊದಲಿಗೆ ಅನ್ಯೋನ್ಯವಾಗಿದ್ದರು ಎಂದು ನುಡಿಯುತ್ತಾರೆ. ಹೊಟ್ಟೆ ನೋವಿನ ಕಾರಣದಿಂದ ಮಧುಮಾಲಿನಿ ಆತ್ಮಹತ್ಯೆ ಮಾಡಿಕೊಂಡಳೆಂದು ನನಗೆ ಹಾಗೂ ಕೆಂಪಯ್ಯನಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಮಧು ಮಾಲಿನಿಗೆ ಋತು ಚಕ್ರದ ಸಮಸ್ಯೆಯಿಂದ ಕೆ.ಆರ್ ಆಸ್ಪತ್ರೆಯಲ್ಲಿ ತಪಾಸಣೆಗೆ ಒಳಪಡುತ್ತಿದ್ದಳು ಎನ್ನುವುದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಆರೋಪಿತರು ಮಧುಮಾಲಿನಿಗೆ ತವರು ಮನೆಯಿಂದ ಒಡವೆ ತರುವಂತೆ ಹಾಗೂ ಹಣವನ್ನು ಪಡೆದು ತರುವಂತೆ ಒತ್ತಾಯ ಪಡಿಸಿ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 2 ನೇ ಆರೋಪಿಯು, ಮಧುಮಾಲಿನಿಗೆ ಕಿರುಕುಳ ನೀಡುತ್ತಿರಲಿಲ್ಲ ಎಂದರೆ ಸರಿ.

19. ಮಧುಮಾಲಿನಿ ತೀರಿಕೊಂಡ ವಿಚಾರ ಗೊತ್ತಾದ ನಂತರ ಮಳವಳ್ಳಿ ಆಸ್ಪತ್ರೆಗೆ ಮಧ್ಯಾಹ್ನ 12.00 ಗಂಟೆಗೆ ಹೋಗಿದ್ದೆನು. ವಡ್ಡರಹಳ್ಳಿಯಲ್ಲಿ, ಮಧುಮಾಲಿನಿ ಶವ ಸಂಸ್ಕಾರ ಬೆಳಗ್ಗೆ ಆಗಿರುತ್ತದೆ. ಸದರಿ ಮಧುಮಾಲಿನಿಯ ಮಕ್ಕಳನ್ನು ನೋಡಲು ಫ್ರಾಸಾ.3 ಮತ್ತು ಅವರ ಹೆಂಡತಿ ಹೋಗುತ್ತಿಲ್ಲವೇ ಎಂದರೆ ಸಾಕ್ಷಿಯು ಸದರಿ ಮಕ್ಕಳು ಕಿರಗಸೂರು ಊರಿಗೆ ಬರುತ್ತಿಲ್ಲ ಎಂದು ಹೇಳುತ್ತಾರೆ. 3 ನೇ ವ್ಯಕ್ತಿಗಳ ಮಾತು ಕೇಳಿಕೊಂಡು ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದು ಫ್ರಾಸಾ.3 ರವರು ಪಶ್ಚಾತ್ತಾಪ ಪಡುತ್ತಿದ್ದಾರೆ ಎಂದು ನನಗೆ ಗೊತ್ತು

ಎಂದರೆ ಸರಿಯಲ್ಲ. ಫ್ರಾಸಾ. 3 ರವರ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ನಾನು ಪೊಲೀಸ್ ಠಾಣೆ ಗೆ ಹೋಗಿ ಈ ಪ್ರಕರಣದ ಬಗ್ಗೆ ಮಾಹಿತಿ ನೀಡಿಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

16. ‘‘ ’’ ಎಂಬ ಭಾಗವನ್ನು ಅಭಿಯೋಜಕರು ಓದಿಹೇಳಿದ್ದು, ಸದರಿ ಹೇಳಿಕೆಯ ಭಾಗವನ್ನು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗವನ್ನು ನಿಪಿ. ಎಂದು ಗುರುತಿಸಲಾಯಿತು.

17.

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.